

# ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ

ಆಧ್ಯಾತ್ಮಿಕ ಸಾಧನೆಯು ಮುಖ್ಯವಾಗಿ ವೈಯಕ್ತಿಕವಾದುದು. ಆದರೆ ನಮ್ಮ ವೈಯಕ್ತಿಕ ಜೀವನವು ಪ್ರಪಂಚದ ಹಲವು ಸಂಗತಿಗಳನ್ನು ಅವಲಂಬಿಸಿಕೊಂಡಿದೆ; ನಾವು ಸಂಪೂರ್ಣ ಸ್ವತಂತ್ರವಾಗಿ ಎಂದೂ ಬದುಕಲಾರೆವು. ನಮ್ಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಮಾಜ, ಸಂಸ್ಕೃತಿ, ಧರ್ಮಗಳು ಪ್ರಮುಖ ಪಾತ್ರ ವಹಿಸುತ್ತವೆ. ಆಧ್ಯಾತ್ಮಿಕ ಜೀವನವನ್ನು ನಡೆಸುವವನು ತನ್ನ ಸಮಾಜದೊಂದಿಗೆ ತಾನು ಹೊಂದಿರುವ ಸಂಬಂಧ, ಸಮಾಜವನ್ನು ಸಂಸ್ಕೃತಿ ಹಾಗೂ ಧರ್ಮ ಮುನ್ನಡೆಸುವ ಬಗೆ — ಇವನ್ನು ಅರಿತುಕೊಳ್ಳಬೇಕು.

## ಸಮಾಜ ಮತ್ತು ಸಂಸ್ಕೃತಿ

ಸಾಮೂಹಿಕವಾಗಿ ಬದುಕುವುದು ಜೀವಿಗಳ ಸಹಜ ಸ್ವಭಾವ. ಕಾಡಿನಲ್ಲಿ ವಾಸಿಸುವ ಪ್ರಾಣಿಗಳಲ್ಲಿ, ಪಕ್ಷಿ-ಜಲಚರಗಳಲ್ಲಿ ಗುಂಪು ಗುಂಪಾಗಿ ಆಹಾರವನ್ನು ಹುಡುಕುವ, ಬೇಟೆಯಾಡುವ ಕ್ರಮವನ್ನು ನೋಡುತ್ತೇವೆ. ಮಾನವನೂ ಪ್ರಾಣಿಯೇ; ಗುಂಪಾಗಿ ಜೀವಿಸುವ ಅವನ ಸ್ವಭಾವ ಆದಿಮಾನವ ಯುಗದಿಂದಲೂ ಮುಂದುವರಿದುಕೊಂಡು ಬಂದಿದೆ. ಪ್ರಾಚೀನ ಕಾಲದಲ್ಲಿ ಮಾನವನು ಗುಂಪುಗುಂಪಾಗಿ ವಲಸೆ ಹೋಗುತ್ತ, ಅಲ್ಲಲ್ಲಿ ತಾತ್ಕಾಲಿಕವಾಗಿ ನೆಲೆನಿಂತು ಬದುಕುತ್ತಿದ್ದ; ಮುಂದೆ ಕೃಷಿ ಮುಂತಾದ ಕಸುಬುಗಳ ಆವಿಷ್ಕಾರವಾದಂತೆ, ಕೆಲವು ಅನುಕೂಲಕರ ಪ್ರದೇಶಗಳಲ್ಲಿ (ಹೆಚ್ಚಾಗಿ ನದೀತೀರಗಳಲ್ಲಿ) ವಾಸಿಸತೊಡಗಿದ.

ಹೀಗೆ ಗ್ರಾಮಜೀವನ, ಮುಂದೆ ನಾಗರಿಕತೆ ಬೆಳೆಯಿತು. ಮಾನವ ಕುಟುಂಬಗಳು ವೃದ್ಧಿ ಹೊಂದಿ ದೊಡ್ಡ ಸಮಾಜಗಳಾದವು. ತಮ್ಮ ವಲಸೆಯನ್ನು ವಿಸ್ತರಿಸುತ್ತ ವಿವಿಧ ಭೂಪ್ರದೇಶಗಳಲ್ಲಿ ಜನರು ಜೀವಿಸತೊಡಗಿದರು. ಆಯಾ ಭೂಪ್ರಕೃತಿ, ಹವಾಮಾನ, ವಿಶಿಷ್ಟ ಜೀವನಕ್ರಮಗಳಿಗನುಗುಣವಾಗಿ, ವಿವಿಧ ಸಮಾಜಗಳಲ್ಲಿ ವೈವಿಧ್ಯಮಯವಾದ ಸಾಂಸ್ಕೃತಿಕ ಬಗೆಗಳು ಕಾಣಿಸಿಕೊಂಡಿವೆ. 'ಸಂಸ್ಕೃತಿ' ಎನ್ನುವಾಗ ಒಂದು ಸಮಾಜವು ಬಹಳ ಕಾಲದಿಂದ ರೂಢಿಸಿಕೊಂಡು ಬಂದಿರುವ ರೀತಿನೀತಿಗಳು, ಸದ್ಯದಲ್ಲಿ ಹತ್ತಾರು ಕ್ಷೇತ್ರಗಳಲ್ಲಿ ಮಾಡುತ್ತಿರುವ ಕಾರ್ಯಗಳು, ಆಯಾ ಸಮಾಜಕ್ಕೆ ವಿಶಿಷ್ಟವಾದ ಜೀವನಕ್ರಮ — ಎಲ್ಲವೂ ಒಳಗೊಳ್ಳುತ್ತವೆ. ಒಂದರ್ಥದಲ್ಲಿ 'ಸಂಸ್ಕೃತಿ' ಎನ್ನುವಾಗ 'ಒಂದು ಸಮಾಜದ ಜನಜೀವನದಲ್ಲಿ ಕಂಡುಬರುವ ಎಲ್ಲ ವಿಶಿಷ್ಟ ಅಂಶಗಳು' ಎಂದು ತಿಳಿದುಕೊಳ್ಳಬೇಕು; ಆದರೆ ಸಂಸ್ಕೃತಿ ಎಂದರೆ 'ಸುಸಂಸ್ಕೃತ ಜೀವನದ ಎಲ್ಲ ಒಳ್ಳೆಯ ಸಂಗತಿಗಳು' ಎಂಬ ಭಾವನೆ ಕೂಡ ಅಲ್ಲಿ ಅನಿವಾರ್ಯವಾಗಿ ಮೂಡಿಬರುತ್ತದೆ.

## ಸಂಸ್ಕೃತಿಯ ಪ್ರಧಾನ ಅಂಗವಾಗಿ ಧರ್ಮ

ವಿವಿಧ ದೇಶಗಳಲ್ಲಿ ಬದುಕುವ ವಿವಿಧ ಜನಾಂಗಗಳಲ್ಲಿ ಕಂಡುಬರುವ ಜೀವನಕ್ರಮದ ವಿಶಿಷ್ಟತೆಯನ್ನೇ ಸಂಸ್ಕೃತಿ ಎನ್ನುತ್ತೇವೆ. ವಿವಿಧ ಕಸುಬು, ವಾಣಿಜ್ಯ-ವ್ಯವಹಾರ, ಕಲೆ-ಸಾಹಿತ್ಯ, ವಿದ್ಯಾಭ್ಯಾಸ, ಧರ್ಮ, ಇತಿಹಾಸ, ಹಬ್ಬ-ಹರಿದಿನ, ಉಡುಗೆ-ತೊಡುಗೆ, ಅಡುಗೆ-ಆಹಾರ ಪದ್ಧತಿ ಇತ್ಯಾದಿ ವಿವಿಧ ನೆಲೆಗಳಲ್ಲಿ ಸಂಸ್ಕೃತಿಯ ವಿಶೇಷತೆಗಳನ್ನು ಗುರುತಿಸುತ್ತೇವೆ. ಇವುಗಳಲ್ಲಿ ಧರ್ಮ ಒಂದು ಪ್ರಧಾನ ಅಂಗವಾಗಿದೆ. ಉಳಿದ ಅಂಶಗಳೆಲ್ಲವೂ ಜನರ ದೈನಂದಿನ ಬದುಕನ್ನು ನೇರವಾಗಿ ಪ್ರಭಾವಿಸುತ್ತವೆ; ಅಥವಾ ಅವರ ಜೀವನ ಶೈಲಿಯೇ ಇಂಥ ಸಾಂಸ್ಕೃತಿಕ ಅಂಶಗಳನ್ನು ರೂಪಿಸುತ್ತವೆ. ಆದರೆ ಅವುಗಳಿಗಿಂತ ಧರ್ಮವೇಕೆ ಅಷ್ಟು ಪ್ರಧಾನವಾಗಿದೆ?

ಲೋಕೋತ್ತರವಾದ, ಅಥವಾ ಇಂದ್ರಿಯಾನುಭವಗಳನ್ನು ಮೀರಿದ 'ಅತೀತ ಸತ್ಯ'ದ ನಂಬಿಕೆಯೇ ಧರ್ಮಗಳಲ್ಲಿ ಪ್ರಧಾನ. ಅವತಾರ, ಪ್ರವಾದಿ, ಋಷಿ ಮುಂತಾದ ಮಹಾಪುರುಷರ ಅನುಭವಗಳನ್ನು ಹಾಗೂ ಉಪದೇಶಗಳನ್ನು ಅವಲಂಬಿಸಿದ ಧರ್ಮವು ಒಟ್ಟು ಸಮಾಜವನ್ನು ಅಸಾಧಾರಣ ರೀತಿಯಲ್ಲಿ ಪ್ರಭಾವಿಸುತ್ತದೆ. ಜನಸಾಮಾನ್ಯರ ನೆಲೆಯನ್ನು ಮೀರಿ ನಿಂತು, ಅತಿಶ್ರೇಷ್ಠ ಸತ್ಯ, ಮೌಲ್ಯ, ಆದರ್ಶಗಳನ್ನು ಎತ್ತಿಹಿಡಿಯುವ ಮಹಾತ್ಮರು ದೈವೀಶಕ್ತಿಯಿಂದ ಕೂಡಿದ್ದರಿಂದಲೇ ಅವರಿಗೆ ಇಡೀ ಸಮಾಜದ ಗತಿಯನ್ನು ನಿಯಂತ್ರಿಸುವುದು, ಅದನ್ನು ಅದ್ಭುತವಾದ ರೀತಿಯಲ್ಲಿ ಪ್ರಭಾವಿಸುವುದು ಸಾಧ್ಯವಾಯಿತು. ಸಮಾಜದ ನೀತಿ, ನಿಯಮಗಳನ್ನೂ ದೈನಂದಿನ ಜೀವನ ಪದ್ಧತಿಗಳನ್ನೂ, ಜನರ ನಂಬಿಕೆ-ಆಚರಣೆ-ನಡವಳಿಕೆಗಳನ್ನೂ ಧರ್ಮದಷ್ಟು ಪ್ರಭಾವಿಸಿದ ಇತರ ಅಂಶಗಳೇ ಇಲ್ಲವೆನ್ನಬಹುದು. ಕಸುಬು, ಆರ್ಥಿಕ ವ್ಯವಹಾರ, ಊಟೋಪಚಾರ, ಕಲೆ, ಸಂಸ್ಕೃತಿ ಹೀಗೆ ಎಲ್ಲ ಕ್ಷೇತ್ರಗಳ ಮೇಲೆ ಧರ್ಮ ಬೀರುವ ಪ್ರಭಾವ ದೀರ್ಘಕಾಲಿಕವೂ, ಅತ್ಯಂತ ದಟ್ಟವೂ

ವ್ಯಾಪಕವೂ ಆಗಿರುವುದನ್ನು ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ಕಾಣಬಹುದು.

ನಾಸ್ತಿಕತೆ, ಜಡವಾದ, ಮುಕ್ತ ಚಿಂತನೆ (free-thinking) ಮುಂತಾದ ವಿಚಾರಗಳು ಕೆಲವು ಸಮಾಜಗಳಲ್ಲಿ, ಕೆಲವು ವಲಯಗಳಲ್ಲಿ ತನ್ನ ಪ್ರಭಾವವನ್ನು ಬೀರಿದ್ದರೂ, ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ಧರ್ಮವು ಬೀರಿರುವ ಪ್ರಭಾವಕ್ಕೆ ಹೋಲಿಸಿದರೆ ಅವುಗಳ ಪ್ರಭಾವ ನಗಣ್ಯವೆಂದೇ ಹೇಳಬೇಕು. ವೈಯಕ್ತಿಕ ನೆಲೆಯಲ್ಲಿ ಆಸ್ತಿಕ-ನಾಸ್ತಿಕವೆಂಬ ವಿಂಗಡನೆ ಮುಖ್ಯವಾಗಬಹುದು; ಒಟ್ಟು ಸಮಾಜವೆಂಬ ದೃಷ್ಟಿಯಲ್ಲಿ ನೋಡುವಾಗ ಅಲ್ಲಿನ ಧಾರ್ಮಿಕ ಸಂಬಂಧವು ಆ ಸಮಾಜದ ಮಟ್ಟಿಗೆ ಅವಿಭಾಜ್ಯವಾಗಿಯೇ ಇರುವುದು ಕಂಡುಬರುತ್ತದೆ.

## ಆಧ್ಯಾತ್ಮಿಕತೆ-ಧರ್ಮದ ತಿರುಳು

ಪ್ರಪಂಚದ ಎಲ್ಲ ಸಮಾಜಗಳನ್ನೂ ಧರ್ಮದಷ್ಟು ಪ್ರಭಾವಿಸಿದ ಮತ್ತೊಂದು ಶಕ್ತಿ ಯಾವುದೂ ಇಲ್ಲವೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ವೈಜ್ಞಾನಿಕ ಆವಿಷ್ಕಾರ, ಕಂಪ್ಯೂಟರ್ ಜಗತ್ತಿನ ಈ ಯುಗದಲ್ಲೂ ಇದು ನಿಜ. ಧರ್ಮವು ಸಮಾಜದ ಮೇಲೆ ಇಷ್ಟೊಂದು ಪ್ರಭಾವ ಬೀರಲು ಕಾರಣವೇನು? ಅದೆಂದರೆ, ಧರ್ಮದ ತಿರುಳು ಆಧ್ಯಾತ್ಮಿಕತೆಯಾಗಿರುವುದು.

ಆಧ್ಯಾತ್ಮಿಕತೆಯೆಂದರೆ ಅದು ಕೇವಲ ತತ್ತ್ವವಲ್ಲ; ನೀತಿ, ನಿಯಮಗಳ ಸೂತ್ರಗಳಲ್ಲ. ಅದು ವಿಶಿಷ್ಟವಾದ ಒಂದು ರೀತಿಯ ಬದುಕು. ನಮಗೆ ಗೋಚರವಾಗುವ ಪ್ರಪಂಚವನ್ನು ಮೀರಿದ ಒಂದು ಸತ್ಯವನ್ನು ನಂಬಿ, ಅದನ್ನು ಅವಲಂಬಿಸಿಯೇ ತನ್ನೆಲ್ಲ ಬದುಕನ್ನೂ ಪರಿವರ್ತಿಸಿಕೊಳ್ಳುವ ಬದುಕು ಅದು. ಹಿಂದೆ ಆ ಸತ್ಯವನ್ನು ಕಂಡ ಮಹಾತ್ಮರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತ, ಜೀವನದುದ್ದಕ್ಕೂ ಆ ಸತ್ಯವನ್ನು (ಆ ಸತ್ಯಕ್ಕೆ ಯಾವುದೇ ಹೆಸರುಗಳಿರಲಿ : ದೇವರು, ಭಗವಂತ, ಆತ್ಮ, ಬ್ರಹ್ಮ ಇತ್ಯಾದಿ) ಕಾಣುವ ಗುರಿಯನ್ನು ಇಟ್ಟುಕೊಂಡವರ ಬದುಕೇ ಆಧ್ಯಾತ್ಮಿಕ ಬದುಕು. ಈ ಆದರ್ಶಕ್ಕನುಗುಣವಾಗಿ ಧಾರ್ಮಿಕ ತತ್ತ್ವ, ನಂಬಿಕೆ, ಶಾಸ್ತ್ರಗ್ರಂಥಗಳು, ಆಚಾರ-ವಿಚಾರಗಳು ರೂಪುಗೊಳ್ಳುತ್ತವೆ.

ಆಧ್ಯಾತ್ಮಿಕತೆಯೆಂಬುದು ವೈಯಕ್ತಿಕ; ಒಬ್ಬ ವ್ಯಕ್ತಿ ತನ್ನ ಸಾಧನೆಯನ್ನು ತಾನೇ ಮಾಡಬೇಕು. ಆದರೆ ಅವನು ಸಮಾಜದಿಂದ ಸಂಪೂರ್ಣ ಪ್ರತ್ಯೇಕಗೊಳ್ಳದವರೆಗೂ ಸಮಾಜದ ಜೊತೆಗೆ ಅವನ ಸಂಬಂಧ ಇದ್ದೇ ತೀರಬೇಕು. ಅಲ್ಲಿಯತನಕ ಅವನ ಮೇಲೆ ಸಮಾಜದ ಪ್ರಭಾವ, ಹಾಗೆಯೇ ಸಮಾಜದ ಮೇಲೆ ಅವನ ಪ್ರಭಾವ ಇದ್ದೇ ಇರುತ್ತದೆ. ಆದ್ದರಿಂದ ಆಧ್ಯಾತ್ಮಿಕತೆಯು ಧರ್ಮದ ಮೂಲಕ ಸಮಾಜದ ವಿವಿಧ ವಲಯಗಳನ್ನು ಪ್ರಭಾವಿಸುತ್ತದೆ. ಅದೇ ರೀತಿ, ಸಮಾಜದ ವಿವಿಧ ಸ್ತರಗಳಿಂದ ಆಧ್ಯಾತ್ಮಿಕ ಮಹಾವ್ಯಕ್ತಿಗಳು ಹುಟ್ಟಿಕೊಳ್ಳುತ್ತಾರೆ. ಧಾರ್ಮಿಕ ಪರಂಪರೆ, ಸಂಪ್ರದಾಯಗಳು ಸಮಾಜದ ವಿವಿಧ ನೈತಿಕ, ಕೌಟುಂಬಿಕ ನೀತಿ ನಿಯಮಗಳನ್ನು ರೂಪಿಸುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಹೀಗೆ ಆಧ್ಯಾತ್ಮಿಕತೆ ವೈಯಕ್ತಿಕವಾಗಿದ್ದದ್ದು, ಅಂತಿಮವಾಗಿ ಧರ್ಮದ ಮೂಲಕ ಸಾಮಾಜಿಕವಾಗಿ ವ್ಯಾಪಿಸಿಕೊಳ್ಳುತ್ತದೆ.

## ಆಧ್ಯಾತ್ಮಿಕ ಬದುಕಿನಲ್ಲಿ ಧರ್ಮ, ಸಂಸ್ಕೃತಿಯ ಮಹತ್ವ

ಧರ್ಮ, ಸಂಸ್ಕೃತಿಗಳ ವಿಚಾರವಾಗಿ ನಾವು ಇಷ್ಟೆಲ್ಲ ಚಿಂತನೆ ನಡೆಸಿದರೂ, ಆಧ್ಯಾತ್ಮಿಕ ಜೀವನದಲ್ಲಿ ಅವುಗಳ ಉಪಯೋಗ ವೇನು? — ಈ ಪ್ರಶ್ನೆ ನಮ್ಮಲ್ಲಿ ಉಳಿಯುತ್ತದೆ. ಆಧ್ಯಾತ್ಮಿಕ ಜೀವನ ವೈಯಕ್ತಿಕ ನೆಲೆಯಲ್ಲಿಯೇ (ಅಂತಿಮವಾಗಿ) ಬೆಳೆಯುತ್ತ ಹೋಗುವ ಪ್ರಕ್ರಿಯೆ; ಆದ್ದರಿಂದ ಅದು ಅತ್ಯಂತ ಸೂಕ್ಷ್ಮವಾದದ್ದು, ಹಲವು ರೀತಿಯ ಏರುಪೇರುಗಳಿಂದ ಕೂಡಿದೆ. ಆದ್ದರಿಂದ ಒಬ್ಬ ವ್ಯಕ್ತಿ ಆಧ್ಯಾತ್ಮಿಕ ಜೀವನದಲ್ಲಿ ದೃಢವಾಗಿ ನೆಲೆಗೊಳ್ಳುವ ತನಕ ಅವನಿಗೆ ನೆಲೆನಿಲ್ಲಲು ಬಾಹ್ಯಪ್ರಪಂಚವೇ ಆಧಾರವಾಗಿರುತ್ತದೆ. ಸಮಾಜ, ಸಂಸ್ಕೃತಿ ಹೊತ್ತು ಸಾಗಿಸುವ ಆಧ್ಯಾತ್ಮಿಕ ಅಂಶಗಳನ್ನು ಅವಲಂಬಿಸಿಕೊಂಡೇ ಸಾಧಕನು ಮುಂದುವರಿಯಬೇಕು.

ಒಂದು ಉದಾಹರಣೆಯನ್ನು ನೋಡೋಣ: ಒಬ್ಬ ಯುವಕನಿಗೆ ಯಾವುದೋ ಕಾರಣದಿಂದ ವೈರಾಗ್ಯ ಮೂಡಿ ಬಂತು. ಭಗವತ್ ಸಾಕ್ಷಾತ್ಕಾರದ ಹಂಬಲ ಮೂಡಿತು. ಅದಕ್ಕಾಗಿ ಹೇಗೆ ಪ್ರಯತ್ನಿಸಬೇಕು? ಯಾವ ಮಾರ್ಗ ತುಳಿಯಬೇಕು? ಸ್ಪಷ್ಟವಾದ ಮಾಹಿತಿ ಸಿಗದೆ ತಡಕಾಡುತ್ತಿದ್ದ. ಹತ್ತಾರು ಜನರ ಬಳಿ ವಿಚಾರಿಸಿದಾಗ ಒಬ್ಬೊಬ್ಬರು ಒಂದೊಂದು ರೀತಿಯ ಉತ್ತರ ಕೊಟ್ಟರು. ಅವನಿಗೆ ಗೊಂದಲವುಂಟಾಯಿತು. ಹಲವಾರು ಗ್ರಂಥಗಳನ್ನೋದಿದ, ಅಲ್ಲೆಲ್ಲೂ 'ಒಂದು' ಮಾರ್ಗ ಕಾಣಿಸದೆ, ಹಲವು ವಿಚಾರಗಳ ಕಲಸುಮೇಲೋಗರ ಕಂಡುಬಂತು. ಇನ್ನೆಲ್ಲಿಗೆ ಹೋಗಲಿ? ಸ್ವಲ್ಪ ಸಮಯದಲ್ಲೇ ಅವನು ಸಾಕ್ಷಾತ್ಕಾರದ ಆಲೋಚನೆಯನ್ನೇ ಬಿಟ್ಟ.

ಆದರೆ ಆಶ್ಚರ್ಯಕರವಾದ ಸಂಗತಿಯೇ ಇದು: ಈ ಸಾಕ್ಷಾತ್ಕಾರದ ಹಂಬಲವೆಂಬುದು ಬಡಪೆಟ್ಟಿಗೆ ಬತ್ತಿಹೋಗುವ ಒರತೆಯಲ್ಲ. ಒಂದೆಡೆ ಬತ್ತಿಹೋದಂತೆ ಕಂಡುಬಂದರೂ, ಇನ್ನೊಂದು ಮೂಲೆಯಿಂದ ಉಕ್ಕಿಬರುತ್ತದೆ. ಯುವಕನ ಹುಡುಕಾಟ ಮುಂದುವರಿಯಿತು. ಕ್ರಮೇಣ ಅವನಿಗರ್ಥವಾಯಿತು, ತಾನು ಅರಸುತ್ತಿದ್ದ ಸಾಕ್ಷಾತ್ಕಾರದ ಮಾರ್ಗ ತನ್ನ ಕೌಟುಂಬಿಕ ಜೀವನದಲ್ಲೇ ಇದೆ. ಪೂಜೆ, ಸಂಧ್ಯಾವಂದನೆ, ದೇವಸ್ಥಾನ, ಧಾರ್ಮಿಕ ಗ್ರಂಥ ವಾಚನ, ಪಾರಾಯಣ, ವ್ರತ, ಜಪ ಹಾಗೂ ಧ್ಯಾನ — ಇವನ್ನೆಲ್ಲ ಅವನ ಪೂರ್ವಿಕರ ಕಾಲದಿಂದಲೂ ಮಾಡುತ್ತ ಬಂದಿದ್ದರು. ಇವೆಲ್ಲ ದೈವೀಕೇಂದ್ರಿತವಾದ ಆಧ್ಯಾತ್ಮಿಕ ಆಚರಣೆಗಳಲ್ಲವೆ? ಇವುಗಳ ಹಿಂದಿರುವ ತತ್ತ್ವ, ಉದ್ದೇಶ, ಗುರಿ — ಇವು ಅವನಿಗೆ ಗೊತ್ತಿರಲಿಲ್ಲ. ಈಗ ತನ್ನ ಹುಡುಕಾಟದಿಂದಾಗಿ ಹೊಸ ಬೆಳಕು ಮೂಡಿ ಬಂತು. ಎಲ್ಲ ಧಾರ್ಮಿಕ ಕ್ರಿಯೆಗಳನ್ನೂ ಬಿಟ್ಟಿದ್ದವನು ಹೊಸ ಉತ್ಸಾಹದಿಂದ ಮತ್ತೆ ಅವೆಲ್ಲವನ್ನೂ ಆರಂಭಿಸಿದ. ಹೊಸ ದಿಕ್ಕಿನಲ್ಲಿ ನಡೆಯತೊಡಗಿದ.

ಸಮಾಜದಲ್ಲಿ ಬೆಳೆದುಕೊಂಡು ಬಂದಿರುವ ಸಂಸ್ಕೃತಿ ನಮಗರಿವಿಲ್ಲದೆ ನಮ್ಮನ್ನು ಧಾರ್ಮಿಕ ಕ್ರಿಯೆ, ಆಚರಣೆಗಳಲ್ಲಿ ತೊಡಗಿ

ಸುತ್ತ ನಮ್ಮನ್ನು ಆಧ್ಯಾತ್ಮಿಕತೆಯತ್ತ ಕರೆದೊಯ್ಯುತ್ತದೆ. ಇದನ್ನು ನಾವು ಅರಿವಿನೊಂದಿಗೆ ಪ್ರಜ್ಞಾಪೂರ್ವಕವಾಗಿ ಮಾಡಿದಾಗಲೇ ಅದು ಆಧ್ಯಾತ್ಮಿಕ ಜೀವನವಾಗುವುದು. ಎಳೆಯ ವಯಸ್ಸಿನಲ್ಲೇ ಇದನ್ನು ಸ್ಪಷ್ಟವಾಗಿ ಅರಿತುಕೊಳ್ಳುವ ಸಾಮರ್ಥ್ಯವಿಲ್ಲದ ಯುವಕರು, ಆಧುನಿಕ ಜೀವನದ ಪ್ರಭಾವಕ್ಕೆ ಒಳಗಾಗಿ 'ಇವೆಲ್ಲ ಕೆಲಸಕ್ಕೆ ಬಾರದ ಗೊಡ್ಡು ಆಚರಣೆಗಳು' ಎಂದು ಅವನ್ನೆಲ್ಲ ಅಸಡ್ಡೆಯಿಂದ ಬಿಟ್ಟುಬಿಡುವ ಸಂಭವವೇ ಹೆಚ್ಚು. ಹಾಗಾಗದಂತೆ ಅವರನ್ನು ರಕ್ಷಿಸುವ, ಅವರಿಗೆ ನಿಜವಾದ ಧರ್ಮ-ಆಧ್ಯಾತ್ಮಿಕತೆಯ ಅರಿವನ್ನು ಕಲಿಸಿಕೊಡುವ ಜವಾಬ್ದಾರಿ ಹಿರಿಯರದಾಗಬೇಕು.

## ಈಶಾವಾಸ್ಯಮಿದಂ ಸರ್ವಂ

ಅತೀತ ಸತ್ಯದ ಬೆಳಕಿನಂದ ಹೊರಹೊಮ್ಮಿದ ಹೊಸ ದೃಷ್ಟಿ ಆಧ್ಯಾತ್ಮಿಕ ತತ್ತ್ವಗಳಾಗಿಯೂ, ಸಮಾಜದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯಾಗಿಯೂ ಪ್ರವಹಿಸುತ್ತ ಬಂತು. ಈ ಪರಂಪರೆಯ ಪೋಷಣೆ, ಆರೈಕೆಗಳಿಂದ ಆಧ್ಯಾತ್ಮಿಕ ಪ್ರೇರಣೆ ಹೊಂದಿ ವಿವೇಕ, ವೈರಾಗ್ಯ, ಭಕ್ತಿಸಂಪನ್ನನಾದ ಒಬ್ಬ ವ್ಯಕ್ತಿ ಏಕಾಂತವನ್ನರಸಿ ಹೋಗುವುದು, ತಪಸ್ಸು-ಧ್ಯಾನ-ಸಾಧನೆಗಳಲ್ಲಿ ನಿರತನಾಗಿ ಆತ್ಮಸಾಕ್ಷಾತ್ಕಾರಕ್ಕಾಗಿ ನಿರಂತರ ಯತ್ನಿಸುವುದು ಭಾರತ ದೇಶದಲ್ಲಿ ಅತಿ ಸಹಜವಾದ ಸಂಗತಿಯೆನಿಸಿತು. ಇದರ ಫಲವಾಗಿ ಸುದೀರ್ಘ ಕಾಲ ಸಾಧನೆ ಮಾಡಿದ ವ್ಯಕ್ತಿ ಇಡೀ ಜಗತ್ತನ್ನೇ ಪ್ರೀತಿಸಬೇಕು, ಪ್ರತಿಯೊಬ್ಬ ಮಾನವನನ್ನು, ಪಶು ಪಕ್ಷಿ ಪ್ರಾಣಿ ಕ್ರಿಮಿಕೀಟಾದಿಗಳನ್ನು ಕರುಣೆ-ಸಮತ್ವ-ಆತ್ಮೀಯತೆಗಳಿಂದ ಕಾಣಬೇಕು; ಇದು ಆದರ್ಶ. ಏಕೆಂದರೆ ಸಮಸ್ತ ಜೀವಿಗಳಲ್ಲೂ, ಪ್ರಪಂಚದ ಕಣಕಣದಲ್ಲೂ ಭಗವಂತನ ಚಿದಂಶದ ಕಿಡಿಯನ್ನೇ ಅವನು ಕಾಣಬೇಕು — ಇದು ಆಧ್ಯಾತ್ಮಿಕ ವ್ಯಕ್ತಿಯ ಆದರ್ಶ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಇಂತಹ ಸಾಧಕನಲ್ಲಿ ವೈಯಕ್ತಿಕತೆ, ಕೇವಲ ತನ್ನ ಉನ್ನತಿಯ ಬಯಕೆ, ಪ್ರಪಂಚ ವಿಮುಖತೆ, ಸಮಾಜದ ಮೇಲೆ ಉಪೇಕ್ಷೆ ಕಂಡುಬರುವುದುಂಟು. ಆಧ್ಯಾತ್ಮಿಕ ಉನ್ನತಿಯಾದಂತೆ ವ್ಯಕ್ತಿಯ ಹೃದಯ ವಿಶಾಲವಾಗಬೇಕು; ಅಲ್ಲಿ ಇಂತಹ ಸಂಕುಚಿತ ಭಾವಕ್ಕೆ, ಸ್ವಾರ್ಥಬುದ್ಧಿಗೆ ಅವಕಾಶವೆಲ್ಲಿ? ಪ್ರಪಂಚದ ಮೇಲೆ ವೈರಾಗ್ಯದ ನೆಪದಲ್ಲಿ ಪ್ರಪಂಚವನ್ನು ದ್ವೇಷಿಸುವ ಭಾವನೆ ಬೆಳೆಸಿಕೊಂಡಾಗ ಇಂಥ ಸ್ವಾರ್ಥಭಾವ ಬೆಳೆಯುವ ಸಾಧ್ಯತೆಯಿದೆ. 'ತನ್ನೊಳಗೆ ತಾನು ದೇವರನ್ನು ಕಂಡ ಬಳಿಕ ಎಲ್ಲೆಡೆ ದೇವರನ್ನು ನೋಡುತ್ತೇನೆ' ಎಂದು ಹೊರಟವನು, ಪ್ರಪಂಚದಲ್ಲಿ ಭಗವಂತನ ಅಸ್ತಿತ್ವವನ್ನು ಕಾಣದೆ, ಸಂಕುಚಿತಭಾವದಿಂದ ಸ್ವಕೇಂದ್ರಿತ ವ್ಯಕ್ತಿಯಾಗುವ ಅಪಾಯವಿದೆ. ಈ ತೊಂದರೆಯನ್ನು ನಿವಾರಿಸಲು ಅತ್ಯುತ್ತಮ ದೃಷ್ಟಿಕೋನವೇ ಉಪನಿಷತ್ತುಗಳಲ್ಲಿ ಕಂಡುಬರುವ ಆತ್ಮನ ಸರ್ವವ್ಯಾಪಕ ಭಾವ. **'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್'** — ಈ ಸಮಸ್ತ ವಿಶ್ವವು ಭಗವಂತನ ಆವಾಸಸ್ಥಾನವಾಗಿದೆ; ಅಂತಹ ಈಶನ ಭಾವದಿಂದ ಇಡೀ ಜಗತ್ತನ್ನು ವ್ಯಾಪಿಸಬೇಕು ಎಂಬ ಆದರ್ಶ ಇಲ್ಲಿನದು. ಅಂತೆಯೇ, ಛಾಂದೋಗ್ಯೋಪನಿಷತ್ತಿನಲ್ಲಿ ಬರುವ **'ಸರ್ವಂ ಖಲ್ವಿದಂ ಬ್ರಹ್ಮ'** (ಇದೆಲ್ಲವೂ ಬ್ರಹ್ಮವೇ) ಎಂಬ ಮಾತಿನಲ್ಲಿಯೂ ಪ್ರಪಂಚವನ್ನು ದೈವೀಭಾವದಿಂದ ಕಾಣಬೇಕೆಂಬ ಆದರ್ಶವಿದೆ. ಸಾಧಕನಲ್ಲಿ ಸಮದೃಷ್ಟಿ, ಸಮಗ್ರ ಮನೋಭಾವ ವಿಕಾಸ ಹೊಂದಿದಾಗಲೇ ಅವನ ಹೃದಯ ಸಂಕುಚಿತ ಭಾವವನ್ನು ತೊರೆದು, ವಿಶ್ವವನ್ನೆಲ್ಲ ತುಂಬಿರುವ ಭಗವಂತನ ಅಸ್ತಿತ್ವವನ್ನು ಗ್ರಹಿಸಲು ಸಮರ್ಥವಾಗುವುದು. ಆಗ ಸಾಕ್ಷಾತ್ಕಾರಕ್ಕೆ ಮೊದಲು ಅಥವಾ ಸಾಕ್ಷಾತ್ಕಾರವಾದ ನಂತರ ಸಾಧಕನ ಭಾವ, **'ಸರ್ವತ್ರ ಸಮದರ್ಶನಃ'** ಹಾಗೂ **'ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ'** *(ಗೀತಾ, ೬.೨೯-೩೦)* ಎಂದಾಗುವುದು.

## ಶ್ರೀರಾಮಕೃಷ್ಣರು ತೋರಿದ ಮಾರ್ಗ

ಬಾಲಕ ನರೇಂದ್ರನಿಗೆ ತೀವ್ರ ವೈರಾಗ್ಯವುಂಟಾಗಿ, ಇಡೀದಿನ ತಾನು ಧ್ಯಾನ, ಸಮಾಧಿಯಲ್ಲಿ ಮುಳುಗಿರಬೇಕು, ಕೇವಲ ಆಹಾರ ಸೇವನೆಗಾಗಿ ಮಾತ್ರ ಬಹಿರ್ಮುಖನಾಗಬೇಕು ಎಂಬ ಹಂಬಲವುಂಟಾಯಿತು. ತನ್ನ ಬಯಕೆಯನ್ನು ಗುರು ಶ್ರೀರಾಮಕೃಷ್ಣರಿಗೆ ತಿಳಿಸಿದಾಗ, ಅವರು ನರೇಂದ್ರನನ್ನು ಬಯ್ಯುತ್ತ, ''ಛಿ! ನಾಚಿಕೆಯಾಗಬೇಕು ನಿನಗೆ! ಅದಕ್ಕಿಂತಲೂ ಉನ್ನತವಾದ ಅವಸ್ಥೆಯಿದೆ. ಆಲದ ಮರದಂತೆ ಹಲವು ಜೀವಿಗಳಿಗೆ ಆಶ್ರಯ ನೀಡಿ, ಅವುಗಳನ್ನು ಉದ್ಧರಿಸುವ ಮಹಾತ್ಮ ನೀನಾಗುವೆ ಎಂದುಕೊಂಡಿದ್ದೆ'' ಎಂದರು.

ಇಡೀ ಸಮಾಜದ ಹಿತವನ್ನು ಬಯಸಿ, ಜೀವಸೇವೆ ಮಾಡುವ ಮೂಲಕ ತನ್ನ ಸಾಕ್ಷಾತ್ಕಾರಕ್ಕಾಗಿ ಸಾಧನೆ ಮಾಡುವ ಹೊಸ ಆದರ್ಶ ಶ್ರೀರಾಮಕೃಷ್ಣರಿಂದ ಮೂಡಿಬಂದುದು ಹೀಗೆ. ಆತ್ಮಸಾಕ್ಷಾತ್ಕಾರವಿಲ್ಲದೆ ಆಧ್ಯಾತ್ಮಿಕತೆಯಿಲ್ಲ; ಸರ್ವತ್ರ ಸಮದರ್ಶನವಿಲ್ಲದೆ ಜಗತ್ತಿನ ಕಲ್ಯಾಣವಿಲ್ಲ. ಇವೆರಡನ್ನೂ ಮೇಳೈಸಿ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** (ತನ್ನ ಮೋಕ್ಷಕ್ಕಾಗಿ ಹಾಗೂ ಜಗತ್ತಿನ ಹಿತಕ್ಕಾಗಿ) ಎಂಬ ಅವಳಿ ಆದರ್ಶವನ್ನು ಮುಂದಿಟ್ಟುಕೊಂಡು ಸ್ವಾಮೀಜಿ ರಾಮಕೃಷ್ಣ ಮಠ ಮತ್ತು ಮಿಷನ್ನನ್ನು ಸ್ಥಾಪಿಸಿದರು. ಧರ್ಮ, ಸಂಸ್ಕೃತಿ, ಆಧ್ಯಾತ್ಮಿಕತೆ ಇವುಗಳ ಸಮತೋಲನದೊಂದಿಗೆ ಸಾಧನೆ ಮಾಡುತ್ತ, ಸಮಾಜದ ಹಿತಕ್ಕಾಗಿ ದುಡಿಯುವ, ಜೀವಸೇವೆಯೇ ಆತ್ಮಪೂಜೆಯೆಂಬುದನ್ನು ನಿತ್ಯಜೀವನದಲ್ಲಿ ಆಚರಣೆಗೆ ತರುವ ಕಾರ್ಯ ಇಂದಿಗೂ ಈ ಸಂಸ್ಥೆಗಳ ಮೂಲಕ ನಡೆಯುತ್ತಿದೆ.

### ಮೇ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೭ | ಮಂಗಳವಾರ | ಶ್ರೀ ಬಸವ ಜಯಂತಿ |
| ೯ | ಗುರುವಾರ | ಶ್ರೀ ಶಂಕರ ಜಯಂತಿ |
| ೯ | ಗುರುವಾರ | ಶ್ರೀ ರಾಮಾನುಜ ಜಯಂತಿ |
| ೧೫ | ಬುಧವಾರ | ಏಕಾದಶಿ |
| ೧೮ | ಶನಿವಾರ | ಬುದ್ಧಪೂರ್ಣಿಮೆ |
| ೩೦ | ಗುರುವಾರ | ಏಕಾದಶಿ |

* *ವಿ.ಸೂ : ಏಪ್ರಿಲ್ ತಿಂಗಳ ಕಾರ್ಯಕ್ರಮಗಳು ತಪ್ಪಾಗಿ ಮುದ್ರಿತವಾಗಿವೆ. ಅಲ್ಲಿನ ಹಲವು ಕಾರ್ಯಕ್ರಮಗಳು ನಿಜವಾಗಿ ಈ ತಿಂಗಳು ಬರುತ್ತವೆ. ತಪ್ಪಿಗಾಗಿ ವಿಷಾದಿಸುತ್ತೇವೆ.*

# ಸ್ವ-ಪ್ರಯತ್ನ



❁ ಮೊದಲು ಸ್ವಲ್ಪ ಕಾಲ ಸೊಂಟ ಕಟ್ಟ ಬೇಕಾಗುತ್ತದೆ. ಬಳಿಕ ಅಷ್ಟು ಶ್ರಮ ತೆಗೆದುಕೊಳ್ಳ ಬೇಕಾಗಿಲ್ಲ. ಎಲ್ಲಿಯವರೆಗೆ ದೋಣಿ ಅಲೆ, ಬಿರುಮಳೆ, ಬಿರುಗಾಳಿ ಇವುಗಳ ಮೂಲಕ ಅಥವಾ ನದಿಯ ತಿರುವಿನ ಮೂಲಕ ಹಾದು ಹೋಗಬೇಕಾಗಿರುವುದೊ ಅಲ್ಲಿಯವರೆಗೆ ದೋಣಿ ನಡೆಸುವವ ಎದ್ದು ನಿಂತು ಚುಕ್ಕಾಣಿ ಹಲಗೆಯನ್ನು ಬಿಗಿಯಾಗಿ ಹಿಡಿದುಕೊಂಡಿರ ಬೇಕಾಗುತ್ತದೆ. ಆದರೆ ಅದನ್ನು ದಾಟಿಯಾದ ನಂತರ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಅದು ತಿರುವನ್ನು ಹಾದ ನಂತರ ಅನುಕೂಲವಾದ ಗಾಳಿ ಬೀಸ ಲಾರಂಭಿಸಿದರೆ, ಚುಕ್ಕಾಣಿ ಹಲಗೆಯನ್ನು ಸುಮ್ಮನೆ ಕೈಯಲ್ಲಿ ಹಿಡಿದುಕೊಂಡು ಹಾಯಾಗಿ ಕುಳಿತುಕೊಳ್ಳುತ್ತಾನೆ. ಬಳಿಕ ಪಟ ಕಟ್ಟಲು ವ್ಯವಸ್ಥೆ ಮಾಡಿ ತಂಬಾಕು ಸೇದಲು ಸಿದ್ಧನಾಗುತ್ತಾನೆ. ಹಾಗೇನೆ ಸಾಧಕ ಕಾಮ-ಕಾಂಚನಗಳ ಬಿರುಗಾಳಿ, ಬಿರುಮಳೆ ಇವನ್ನೆಲ್ಲಾ ದಾಟಿಬಿಟ್ಟ ಅಂದರೆ ಆಗ ಆತನಿಗೆ ಶಾಂತಿ.

❁ ಉದಾಹರಣೆಗೆ ತೂಗುವ ಕಡ್ಡಿ ತೆಗೆದುಕೊ. ಒಂದು ತಟ್ಟೆಗೆ ಭಾರ ಹಾಕಿದರೆ ಕೆಳಗಿನ ಮತ್ತು ಮೇಲಿನ ಮುಳ್ಳು ಒಂದು ಮುಖವಾಗಿರುವುದಿಲ್ಲ. ಕೆಳಗಿನ ಮುಳ್ಳೇ ಮನಸ್ಸು-ಮೇಲಿನ ಮುಳ್ಳೇ ಭಗವಂತ. ಎರಡು ಮುಳ್ಳೂ ಒಂದೇ ಮುಖ ವಾಗುವುದಕ್ಕೆ ಯೋಗ ಅಂತ ಹೆಸರು.

❁ ಮನಸ್ಸು ಸ್ಥಿರವಾಗದ ಹೊರತು ಯೋಗಾವಸ್ಥೆ ಬಾರದು. ಸಂಸಾರದ ಗಾಳಿ ಮನಸ್ಸೆಂಬ ದೀಪವನ್ನು ಸರ್ವದಾ ಅಲ್ಲಾಡಿಸು ತ್ತಿರುತ್ತದೆ. ಆ ದೀಪ ಸಂಪೂರ್ಣವಾಗಿ ಅಲ್ಲಾಡದೆ ಇತ್ತು ಅಂದರೆ ಆಗ ಅದಕ್ಕೆ ಯೋಗಾವಸ್ಥೆ ಬಂದುಬಿಡುತ್ತದೆ.

❁ ಯೋಗಿಗಳ ಮನಸ್ಸು ಸರ್ವದಾ ಭಗವಂತನ ಅಡಿದಾವರೆ ಗಳಲ್ಲಿ ನೆಲಸಿರುತ್ತದೆ — ಸರ್ವದಾ ಆತ್ಮಸ್ಥವಾಗಿರುತ್ತದೆ. ಮುಖ ನೋಡಿದರೇ ಗೊತ್ತಾಗಿಬಿಡುತ್ತದೆ. ಕಣ್ಣೇನೋ ತೆರೆದಿರುತ್ತದೆ, ದೃಷ್ಟಿ ಮಾತ್ರ ಬಹಿರ್ಜಗತ್ತಿನ ಕಡೆಗೇ ಇರುವುದಿಲ್ಲ. ಹಕ್ಕಿ ಕಾವಿಗೆ ಕುಳಿತಿರುವಾಗ ಅದರ ಇಡೀ ಮನಸ್ಸು ಮೊಟ್ಟೆಯ ಮೇಲೆ ನೆಲೆಸಿ, ಅದರ ಕಣ್ಣು ಮಾತ್ರ ಸುಮ್ಮನೆ ಮೇಲಕ್ಕೆ ನೋಡುತ್ತಿರುವ ಹಾಗೆ ಕಾಣಿಸುತ್ತದೆ.

❁ ಕಿರುಮನೆಯೊಳಗಿಟ್ಟಿರುವ ರತ್ನ ನೋಡಬೇಕಾಗಿದ್ದರೆ, ಅದನ್ನು ಸ್ವಾಧೀನ ಪಡಿಸಕೊಳ್ಳಬೇಕಾಗಿದ್ದರೆ, ಶ್ರಮವಹಿಸಿ ಬೀಗದ ಕೈ ವಿಚಾರಿಸಿ ತಂದು ಬಾಗಿಲು ತೆರೆಯಬೇಕಾಗುತ್ತದೆ. ಬಳಿಕ ರತ್ನವನ್ನು ಹೊರಕ್ಕೆ ತೆಗೆದುಕೊಂಡು ಬರಬೇಕಾಗುತ್ತದೆ. ಹಾಗೆ ಮಾಡದೆ, ಬೀಗ ಹಾಕಿದ ಬಾಗಿಲಿನ ಮುಂದೆ ಸುಮ್ಮನೆ ನಿಂತು ಕೊಂಡು 'ಈಗ ಬೀಗ ತೆಗೆದಿದ್ದೇನೆ. ಸಂದೂಕದ ಬೀಗವನ್ನು ಮುರಿದಿದ್ದಾಯಿತು. ಈಗ ರತ್ನ ಹೊರಕ್ಕೆ ತೆಗೆದಿದ್ದೇನೆ' ಎಂಬುದಾಗಿ ಭಾವಿಸಿದರೆ ಅದರಿಂದ ಏನು ತಾನೆ ದೊರೆತೀತು? ಸಾಧನೆ ಮಾಡಬೇಕು.

❁ ಚಿತ್ತಶುದ್ಧಿ ಆಗದೆ ಇತ್ತು ಎಂದರೆ, ಭಗವಂತನ ದರ್ಶನ ಪಡೆಯಲಾಗುವುದಿಲ್ಲ. ಕಾಮ, ಕಾಂಚನಾಸಕ್ತಿಯಿಂದ ಮನಸ್ಸು ಮಲಿನ ವಾಗಿಬಿಟ್ಟಿದೆ-ಕೊಳೆಯಿಂದ ತುಂಬಿದೆ. ಸೂಜಿ ಮಣ್ಣಿನಿಂದ ಆವೃತವಾಗಿದ್ದರೆ ಆಗ ಸೂಜಿಗಲ್ಲು ಅದನ್ನು ಎಳೆಯಲಾರದು. ಆ ಮಣ್ಣನ್ನು ತೊಳೆದುಬಿಟ್ಟಿದ್ದೇ ಆದರೆ ಒಡನೆ ಸೂಜಿಗಲ್ಲು ಅದನ್ನು ಎಳೆದುಬಿಡುತ್ತದೆ. ಅದೇ ರೀತಿ ಮನಸ್ಸಿನ ಕೊಳಕನ್ನು ಕಣ್ಣೀರಿನಿಂದ ತೊಳೆದುಬಿಡಬಹುದು. ಯಾರೇ ಆಗಲಿ, 'ಹೇ ಭಗವಂತ, ಮತ್ತೆ ನಾನು ಅಂಥ ಕಾರ್ಯ ಗಳನ್ನು ಮಾಡುವುದಿಲ್ಲ' ಅಂತ ಹೇಳಿ ಅನುತಾಪದಿಂದ ಅತ್ತುದೇ ಆದರೆ, ಕೊಳೆ ತೊಳೆದುಹೋಗುತ್ತದೆ. ಆಗ ಭಗವದ್ರೂಪದ ಸೂಜಿ ಗಲ್ಲು ಮನಸ್ಸೆಂಬ ಸೂಜಿಯನ್ನು ಎಳೆದುಕೊಂಡುಬಿಡುತ್ತದೆ. ಆಗ ಸಮಾಧಿಯುಂಟಾಗುತ್ತದೆ. ಭಗವಂತನ ದರ್ಶನ ದೊರೆಯುತ್ತದೆ.

❁ ಅಭ್ಯಾಸಯೋಗದಿಂದ ಕಾಮಕಾಂಚನಾಸಕ್ತಿಯನ್ನು ತ್ಯಾಗ ಮಾಡಲು ಸಾಧ್ಯ. ಗೀತೆಯಲ್ಲಿ ಹೀಗೆಂದು ಹೇಳಿದೆ: ಅಭ್ಯಾಸದಿಂದ ಮನಸ್ಸು ಅಸಾಧಾರಣ ಶಕ್ತಿಯನ್ನು ಗಳಿಸಿಕೊಳ್ಳು ತ್ತದೆ. ಆಗ ಇಂದ್ರಿಯ ಸಂಯಮ ಮಾಡಲು — ಕಾಮ ಕ್ರೋಧಾದಿಗಳನ್ನು ವಶಪಡಿಸಿಕೊಳ್ಳಲು ಕಷ್ಟವಾಗುವುದಿಲ್ಲ. ಅಂಥ ಮನುಷ್ಯ ಆಮೆಯಂತೆ ವರ್ತಿಸುತ್ತಾನೆ. ಆಮೆ ಒಮ್ಮೆ ತನ್ನ ಕೈ ಕಾಲುಗಳನ್ನು ಒಳಕ್ಕೆ ಸೆಳೆದುಕೊಂಡಿತೆಂದರೆ ಮತ್ತೆ ಅದು ಹೊರಕ್ಕೆ ಬಿಡದು. ಕೊಡಲಿ ತೆಗೆದುಕೊಂಡು ಅದನ್ನು ಚೂರು ಚೂರು ಮಾಡಿದರೂ ಅದು ಅವನ್ನು ಹೊರಕ್ಕೆ ಬಿಡದು.

❁ ಸದಸದ್ವಿಚಾರಕ್ಕೇ 'ವಿವೇಕ' ಅಂತ ಹೆಸರು. ವೈರಾಗ್ಯ ವೆಂದರೆ ಪ್ರಾಪಂಚಿಕ ವಸ್ತುಗಳ ಕಡೆಗೆ ವಿರಕ್ತಿ. ಇವು ಒಮ್ಮೆಗೇ ದೊರೆತುಬಿಡುವುದಿಲ್ಲ — ದಿನವೂ ಅಭ್ಯಾಸ ಮಾಡಬೇಕು. ಮೊದಲು ಕಾಮಕಾಂಚನ ತ್ಯಾಗವನ್ನು ಮಾನಸಿಕವಾಗಿ ಮಾಡ ಬೇಕು. ಬಳಿಕ ಭಗವತ್ ಕೃಪೆಯಿಂದ ಮಾನಸಿಕವಾಗಿಯೂ ಬಾಹ್ಯಿಕವಾಗಿಯೂ ತ್ಯಾಗ ಮಾಡಲು ಆಗುತ್ತದೆ.

❁ ವ್ಯಾಕುಲತೆಯಿಂದ ಭಗವಂತನನ್ನು ಕರೆದರೆ ಆತನ ದರ್ಶನ ಪಡೆಯಬಹುದು. ಅನೇಕ ವಿಷಯಗಳನ್ನು ತಿಳಿದು ಕೊಳ್ಳುವುದರ ಆವಶ್ಯಕತೆಯೇನಿಲ್ಲ.

ಶ್ರೀರಾಮಕೃಷ್ಣ ವಚನವೇದದಿಂದ